ವಾಸುದೇವ ಮೂರ್ತಿ ಪಿ.

# ಲಾಸ್ಟ್ ಕೇಸ್

ಕರೆಗಂಟೆಯ ಸದ್ದಿಗಾಗಿಯೇ ಕಾಯುತ್ತಿದ್ದರೇನೊ ಎಂಬಂತೆ ಬಾಗಿಲು ತೆರೆದುಕೊಂಡಿತು. ಬಾಗಿಲು ತೆರೆದವನು ತನ್ನ ಎದುರು ನಿಂತವನನ್ನು ಆಪಾದಮಸ್ತಕ ನೋಡಿದ. ಸುಮಾರು ಐವತ್ತೈದು ವರ್ಷ, ಬೋಳು ತಲೆ, ಮುಳ್ಳುಮುಖ, ಬಿಳಿ ಶರ್ಟು, ಖಾಕಿ ಪ್ಯಾಂಟು... ಬಿರಿಯುವಂತಹ ಹೊಟ್ಟೆ. ಬಂದವನು ತನ್ನ ಉಬ್ಬಿದ ಹಳದೀ ಹಲ್ಲುಗಳನ್ನು ತೋರಿಸುತ್ತ ಮುಖದಲ್ಲಿ ನಾಟಕೀಯ ನಗು ತಂದುಕೊಂಡು, "ಚಿತ್ರ ಸಾಹಿತಿ ಸೂರ್ಯ ಕಾಮತ್ ಮನೆ ಇದೇನಾ? ಇದ್ದಾರಾ ಒಳಗಡೆ?" ಎಂದು ಕೇಳಿದ.

ಬೇರೆ ಯಾರಿಗೋ ಕಾಯುತ್ತಿರುವಾಗ ಪರಿಚಯವಿಲ್ಲದವರು ಬಂದರಲ್ಲ ಎಂಬ ಅಸಹನೆಯನ್ನು ತೋರಿಸಿಕೊಳ್ಳುತ್ತಲೇ, "ನಾನೇ ಸೂರ್ಯ ಕಾಮತ್. ಆದರೆ ಈಗ ನನ್ನ ಬರವಣಿಗೆಯ ಸಮಯ. ನಿಮ್ಮೊಂದಿಗೆ ಮಾತನಾಡಲು ಆಗದು" ಎಂದು ಬಾಗಿಲು ಹಾಕಲು ಅನುವಾದ ಆ ವ್ಯಕ್ತಿ.

"ತೊಂದರೆ ಕೊಟ್ಟಿದ್ದಕ್ಕೆ ಕ್ಷಮಿಸಿ. ನನ್ನ ಹೆಸರು ಇನ್‌ಸ್ಪೆಕ್ಟರ್ ನಾಗರಾಜಯ್ಯ ಅಂತಾ..."

ಅರ್ಧ ಮುಚ್ಚಿಕೊಂಡಿದ್ದ ಬಾಗಿಲು ತೆರೆದುಕೊಂಡಿತು. ಸೂರ್ಯ ಕಾಮತ್ ಸ್ವಲ್ಪ ಗಾಬರಿಯಿಂದಲೇ, "ಸಾರಿ ಇನ್‌ಸ್ಪೆಕ್ಟರ್, ತಿಳಿಯಲಿಲ್ಲ. ಯಾರೋ ನನ್ನ ಅಭಿಮಾನಿ ಅಂದುಕೊಂಡೆ..."

ಅದೇ ಹಳದಿ ಹಲ್ಲುಗಳನ್ನು ಪ್ರದರ್ಶಿಸುತ್ತಾ ನಾಗರಾಜಯ್ಯ, "ಪರವಾಗಿಲ್ಲ ಬಿಡಿ ಸಾರ್, ದೊಡ್ಡ ಚಿತ್ರ ಸಾಹಿತಿಗಳು, ಬಿಡುವಿರುವುದಿಲ್ಲ. ಗೊತ್ತಾಗುತ್ತೆ... ಒಳಗೆ ಬರಬಹುದಾ?" ಎಂದ.

"ಅಯ್ಯೋ ಬನ್ನಿ ಸಾರ್" ಬಾಗಿಲನ್ನು ಪೂರ್ತಿಯಾಗಿ ತೆರೆದು ಒಳ ಕರೆದ. ಮನದಲ್ಲಿ ಇವನು ಯಾಕಾದರೂ ಬಂದನೋ ಎಂಬ ಭಯ, ಉದ್ವೇಗ. ಅವನ್ನು ಹೊರತೋರದೇ ಒಳಕರೆದ. ನಾಗರಾಜಯ್ಯನ ದೊಡ್ಡ ಹೊಟ್ಟೆ, ಅವನ ವೇಷ, ಹಳದಿ ಹಲ್ಲುಗಳು ಎಲ್ಲಾ ವಿಚಿತ್ರ ಎನಿಸಿತು. ಅದೆಲ್ಲಕ್ಕಿಂತ ಹೆಚ್ಚಾಗಿ ಅವನ ಕಣ್ಣುಗಳು! ಅದೇನೋ ಆಕರ್ಷಣೆ! ಆ ಕಣ್ಣುಗಳು ಅವನ ವಯಸ್ಸಿಗೆ ತಕ್ಕುದಾಗಿಲ್ಲ ಎಂದು ಅನಿಸಿತು. ಮತ್ತೆಮತ್ತೆ ಅದೇ ಕಣ್ಣುಗಳನ್ನು ನೋಡುತ್ತಲೇ ಇರಬೇಕೆಂಬ ಆಸೆ! ಇನ್ನೊಂದು ಕ್ಷಣ ಆ ಕಣ್ಣುಗಳನ್ನು ನೋಡುತ್ತಿದ್ದರೆ ಅವನ ವಶವಾಗಿಬಿಡುತ್ತೇನೆ ಎಂಬ ಭಯದಿಂದ ಅವನೆಡೆ ನೋಡದೇ ಒಳನಡೆದ.

ಒಳಗಡಿಯಿಡುತ್ತಿದ್ದಂತೆಯೇ ಕಂಡಿದ್ದು ವೃತ್ತಾಕಾರದ ಹಾಲ್. ನೆಲದಿಂದ ಎರಡು ಅಡಿ ಕೆಳಗಿರುವ ಆ ಹಾಲ್‌ನ ಸುತ್ತಲೂ ಸೋಫಾಗಳು. ಮಧ್ಯ ಒಂದು ದೊಡ್ಡ ಕುರ್ಚಿ. ಇಡೀ ಹಾಲ್‌ನ ತುಂಬಾ ಆಳೆತ್ತರದ ಶೋಕೇಸ್‌ಗಳು. ಅದರಲ್ಲಿ ಬರೀ ಪ್ರಶಸ್ತಿಫಲಕಗಳು ತುಂಬಿದ್ದವು.

ನಾಗರಾಜಯ್ಯನೊಂದಿಗೆ ಯಾವುದೇ ಮಾತನಾಡದೇ ಮಧ್ಯದಲ್ಲಿದ್ದ ದೊಡ್ಡ ಕುರ್ಚಿಯಲ್ಲಿ ಕುಳಿತು ಕಾಮತ್, "ಹೇಳಿ, ಏನು ಬಂದಿದ್ದು?" ಎಂದು ತಾನೇ ಮಾತು ಶುರು ಮಾಡಿದ. ಅವನ